

# ಲಿಂಗಾಯತ ದರ್ಶನ

ISSN : 2456-6837 ಬಿಡಿ ಪ್ರತಿ ರೂ. ೨೦

ಸಂಪುಟ-೦೯ ಜನೇವರಿ ೨೦೨೨ ಸಂಚಿಕೆ-೦೧

ಜನ್ಮದಿನ



ತ್ಯಾಗವೀರ ಸಿರಸಂಗಿ ಶ್ರೀ ಲಿಂಗರಾಜ ದೇಸಾಯಿ

ವಚನ ಅಧ್ಯಯನ ಕೇಂದ್ರ

ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವ ನಗರ, ಬೆಳಗಾವಿ



॥ ಶ್ರೀ ಗುರು ಬಸವಲಿಂಗಾಯ ನಮಃ ॥



# ಲಿಂಗಾಯತ ದರ್ಶನ

## ಮಾಸಿಕ

ಸಂಪುಟ : ೯ ಜನೇವರಿ ೨೦೨೨ ಸಂಚಿಕೆ : ೧

ಮಾರ್ಗದರ್ಶನ

**ಪೂಜ್ಯಶ್ರೀ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು**

ತೋಂಟದಾರ್ಯ ಸಂಸ್ಥಾನಮಠ, ಗದಗ-ಡಂಬಳ

**ಸಂಪಾದಕ**

ಡಾ॥ ಎನ್. ಜಿ. ಮಹಾದೇವಪ್ಪ

**ಸಹ ಸಂಪಾದಕ**

ಡಾ॥ ರಾಮಕೃಷ್ಣ ಮರಾಠೆ

**ಸಂಪಾದಕ ಮಂಡಳಿ**

ಡಾ॥ ಗುರುಲಿಂಗ ಕಾಪಸೆ
ಡಾ॥ ಸಿ. ಕೆ. ನಾವಲಗಿ
ಶ್ರೀ ಆರ್. ಎಸ್. ಚಾಪಗಾವಿ
ಡಾ॥ ವಿ. ಎಸ್. ಮಾಳಿ
ಡಾ॥ ಬಸವರಾಜ ಜಗಜಂಪಿ
ಶ್ರೀ ಬಿ. ಬಿ. ಹೊಸಮನಿ
ಡಾ. ಎಂ. ಎಸ್. ಹುಲ್ಲೋಳಿ
ಶ್ರೀಮತಿ ನೀಲಗಂಗಾ ಚರಂತಿಮಠ

**ಪ್ರಕಾಶಕರು**

ಕಾರ್ಯದರ್ಶಿ ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ

**ವಚನ ಅಧ್ಯಯನ ಕೇಂದ್ರ**

ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವನಗರ

ಬೆಳಗಾವಿ-೫೯೦೦೧೦

ಮೊ:೯೮೮೬೭೫೭೫೨೨ *email:basavaguru@rediffmail.com*

**Web:** *www.rudrakshimath.in*

**ಚಂದಾವಿವರ**

| | | |
|---|---|---|
| ಮಹಾಪೋಷಕರು | ರೂ. | ೧೦,೦೦೦=೦೦ |
| ಪೋಷಕರು | ರೂ. | ೫೦೦೦=೦೦ |
| ಆಜೀವ | ರೂ. | ೩೦೦೦=೦೦(೨೦ ವರ್ಷ) |
| ಆರುವರ್ಷದ | ರೂ. | ೧೦೦೦=೦೦ |
| ಒಂದುವರ್ಷದ | ರೂ. | ೨೦೦=೦೦ |
| ಬಿಡಿ ಪ್ರತಿ | ರೂ. | ೨೦=೦೦ |

ಚಂದಾಹಣವನ್ನು ನಗದು ಅಥವಾ **ವಚನ ಅಧ್ಯಯನ ಕೇಂದ್ರ** ಹೆಸರಿನಲ್ಲಿ ಕ್ರಾಸ್ ಮಾಡಿದ ಡಿ.ಡಿ/ಚೆಕ್‌ಮುಖಾಂತರ "ನಿರ್ದೇಶಕರು, ವಚನ ಅಧ್ಯಯನ ಕೇಂದ್ರ ನಾಗನೂರು ರುದ್ರಾಕ್ಷಿಮಠ, ಶಿವಬಸವ ನಗರ, ಬೆಳಗಾವಿ-೫೯೦ ೦೧೦" A/C 520101070638493 IFSC-UBIN0920908 ಈ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ.

**ಅಂತರಂಗದೊಳಗೆ.....**

* ಸಂಪಾದಕೀಯ ೨
* ವಚನಾರ್ಥ-ಚಿಂತನ ೪
  • **ಡಾ. ಸಿದ್ಧರಾಮ ಸ್ವಾಮಿಗಳು**
* ತ್ಯಾಗವೀರ ಸಿರಸಂಗಿ ಲಿಂಗರಾಜರು ೬
  • **ಸದಾನಂದ ಕನವಳ್ಳಿ**
* ಕರ್ಮಯೋಗಿಯಿಂದ ಶಿವಯೋಗಿಯಾದಾತನ ಸಿದ್ಧತೆ ೧೦
  • **ವೆಂಕಟೇಶ ಕೆ. ಜನಾದ್ರಿ**
* ಲಿಂಗಾಯತ ಧರ್ಮ : ಅರ್ಥ, ಹುಟ್ಟು ಮತ್ತು ಬೆಳವಣಿಗೆ ೧೪
  • **ರೇವಣಸಿದ್ಧಪ್ಪ ಎಸ್.**
* ಅರಿದಡೆ ಶರಣ ಮರೆದಡೆ ಮಾನವ ೧೯
  • **ರಂಜಾನ್ ದರ್ಗಾ**
* ಕಾಯಕದ ಶರಣ ಗಾಣದ ಕನ್ನಪ್ಪ ೨೨
  • **ಡಾ. ತಿಪ್ಪೇಸ್ವಾಮಿ ಡಿ. ಎಸ್.**
* ಸಾವಿಗೆ ಎದುರಾಗಿ ಬದುಕುವಂಥದು ವಚನ ಸಾಹಿತ್ಯ ೨೫
  • **ಡಾ. ಸಿ. ಕೆ. ನಾವಲಗಿ**
* ಕಾಯಕ ೨೮
  • **ಡಾ. ಬಸವರಾಜ ಸಬರದ**
* ವಚನಗಳಲ್ಲಿ ಸುಖ-ದುಃಖ ಚಿಂತನ ೩೦
  • **ಶಿವಕುಮಾರ ಎಸ್. ಬಳಿಗಾರ**
* ೨೦೨೨ ನೇ ವರ್ಷದ ಬಸವಾದಿ ಶರಣರ ಸ್ಮರಣೋತ್ಸವಗಳು ೩೨
  • **ಪ್ರೊ. ಸಿದ್ಧಣ್ಣ ಲಂಗೋಟಿ**

ಇಲ್ಲಿಯ ಲೇಖನಗಳ ಅಭಿಪ್ರಾಯಗಳು ಲೇಖಕರವೇ ಹೊರತು ಪತ್ರಿಕೆಯ ಅಭಿಪ್ರಾಯಗಳಲ್ಲ. -ಸಂ



**Title-** Ganada Kannappa: A Sharana of Work
- Dr. Thippeswamy D.S.

# ಕಾಯಕದ ಶರಣ ಗಾಣದ ಕನ್ನಪ್ಪ

● ಡಾ. ತಿಪ್ಪೇಸ್ವಾಮಿ ಡಿ. ಎಸ್.

ವಚನ ಸಾಹಿತ್ಯ ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ಈ ಪ್ರಕಾರದ ಉಗಮ ಹತ್ತನೆಯ ಶತಮಾನದಲ್ಲೇ ಆಗಿ ಸೂಳ್ನುಡಿ ಎನಿಸಿ ಸಾಮಾಜಿಕ ಉದ್ದೇಶಗಳನ್ನು ಹೊಂದಿ, ಅಭಿವ್ಯಕ್ತಿಯನ್ನು ಪಡೆದಿದ್ದರೂ, ಹನ್ನೆರಡನೆಯ ಶತಮಾನವೇ ಇದರ ಸಮೃದ್ಧಿಯ ಹಾಗೂ ಉತ್ಕೃರ್ಷದ ಕಾಲವಾಗಿದೆ. ಬಸವ, ಅಲ್ಲಮ, ಚೆನ್ನಬಸವ, ಸಿದ್ಧರಾಮ, ಅಕ್ಕಮಹಾದೇವಿ, ಮಡಿವಾಳ ಮಾಚದೇವ, ಅಂಬಿಗರ ಚೌಡಯ್ಯ, ಮಾದಾರ ಚೆನ್ನಯ್ಯ, ಗಾಣದ ಕನ್ನಪ್ಪನಂಥ ಅನೇಕ ಜನ ಶಿವಶರಣರಿಂದ ಇದು ಆ ಶತಮಾನದ ಕೊನೆಯಲ್ಲಿಯೇ ಶಿಖರವನ್ನು ಮುಟ್ಟಿ ಮುಂದೆ ಹದಿನೈದನೆಯ ಶತಮಾನದಲ್ಲಿ ಮತ್ತೆ ಮುಂದುವರೆದಿದೆ. ಅಷ್ಟೇ ಅಲ್ಲ ಉದ್ದಕ್ಕೂ ಕನ್ನಡ ಸಾಹಿತ್ಯದ ಮೇಲೆ ತನ್ನ ಪ್ರಭಾವವನ್ನು ಬೀರಿ, ಆಧುನಿಕ ಸಾಹಿತ್ಯ ಸಂದರ್ಭದಲ್ಲೂ ಮತ್ತೆ ವಚನ ಪ್ರಕಾರ ಈ ಕಾಲದ ಸಂವೇದನೆಯ ಅಭಿವ್ಯಕ್ತಿಯಾಗಿ ಮೂಡಿರುವುದನ್ನು ಸಂಶೋಧಕರು ಹಾಗೂ ವಿದ್ವಾಂಸರು ಗುರುತಿಸಿದ್ದಾರೆ.

ಗಾಣದ ಕನ್ನಪ್ಪನೆಂಬ ಶಿವಶರಣನು ಕಲ್ಯಾಣ ಪಟ್ಟಣದಲ್ಲಿ ವಾಸಮಾಡಿಕೊಂಡಿದ್ದನು. ಅವನ ಹೆಂಡತಿಯ ಹೆಸರು ರೇಚವ್ವ, ಉಭಯತರು ಶಿವಭಕ್ತಿ ಸಂಪನ್ನರು. ಕಲ್ಯಾಣ ಪಟ್ಟಣದಲ್ಲಿ ಬಸವೇಶ್ವರನ ಸನ್ನಿಧಿಯಲ್ಲಿ ನಡೆಯುತ್ತಿದ್ದ ಶಿವಾನುಭವ ಸದ್ಗೋಷ್ಠಿಗಳನ್ನು ಕೇಳಿ ಲಿಂಗಭಕ್ತಿಯುಳ್ಳವರಾಗಿ ಷಟ್‌ಸ್ಥಲಾಚರಣೆಯಲ್ಲಿ ನಿರತರಾಗಿದ್ದರು. ಆದರೆ ಉಭಯತರು ಗುಪ್ತ ಭಕ್ತಿಯುಳ್ಳವರು. ಆದ್ದರಿಂದ ಅವರ ಭಕ್ತಿಯು ಎಷ್ಟು ಗಾಢವಾಗಿದ್ದಿತೆಂಬುದನ್ನು ಯಾರೂ ಅರಿತಿರಲಿಲ್ಲ. ಗಾಣದ ಕನ್ನಪ್ಪನು ಶಿವಾನುಭವ ಮಂಟಪದಲ್ಲಿ ನಡೆಯುತ್ತಿದ್ದ ಚರ್ಚೆಗಳನ್ನು ಯಾವಾಗಲೂ ಕೇಳುವವನಾದ್ದರಿಂದ ಅವನು ತನ್ನ ಅನುಭಾವಗಳನ್ನು ಕುರಿತು ವಚನಗಳನ್ನು ರಚಿಸುವವನಾದನು. ಈ ಕಾಲದಲ್ಲಿ ಶಿವಾನುಭವ ಮಂಟಪದಲ್ಲಿ ಅತ್ಯಂತ ಮನ್ನಣೆಯನ್ನು ಹೊಂದಿ ಎಲ್ಲರಿಗೂ ಮಾರ್ಗದರ್ಶಿಯಾದನು ಅಲ್ಲಮಪ್ರಭುವು. ಆದ್ದರಿಂದ ಗಾಣದ ಕನ್ನಪ್ಪನು ಅಲ್ಲಮ ಪ್ರಭುವಿನ ಹೆಸರಿನಿಂದಲೇ ತನ್ನ ವಚನಗಳನ್ನು ರಚಿಸಿದ್ದಾನೆ. ಅವನ ವಚನಗಳ ಮುದ್ರಿಕೆಯು 'ಗುಹೇಶ್ವರನ ಶರಣ ಅಲ್ಲಮ' ಎಂಬುದಾಗಿದೆ. ಹೀಗೆ ಕನ್ನಪ್ಪನು ಅನೇಕ ವರ್ಷ ಪರ್ಯಂತರ ಕಲ್ಯಾಣ ಪಟ್ಟಣದಲ್ಲಿ ವಾಸವಾಗಿದ್ದನು.

ಕನ್ನಪ್ಪನು ನಿತ್ಯಮಾಡುವ ಕಾಯಕವು ಮೀನು ಹಿಡಿಯುವದೇ ಆಗಿತ್ತು. ಅವನು ದಿನಾಲು ಮುಂಜಾವಿನಲ್ಲೆದ್ದು ಲಿಂಗ ಪೂಜಾದಿ ಕ್ರಿಯೆಗಳನ್ನು ತೀರಿಸಿಕೊಂಡು ಗಾಣವಲೆ ಬೀಸುಬಲೆ ಮೊದಲಾದ ಬಲೆಗಳನ್ನು ತೆಗೆದುಕೊಂಡು ತ್ರಿಪುರಾಂತಕೇಶ್ವರನ ಕೆರೆಯಲ್ಲಿ ಮೀನುಗಳನ್ನು ಹಿಡಿಯುತ್ತ ಕುಳಿತುಕೊಳ್ಳುವನು. ಹೀಗೆ ಮೀನುಗಳನ್ನು ಹಿಡಿದು ಅವುಗಳನ್ನು ಪೇಟೆಯಲ್ಲಿ ಮಾರಾಟ ಮಾಡಿ ಬಂದ ಲಾಭವನ್ನು ಜಂಗಮರಿಗೆ ನೀಡಿ ಲಿಂಗಾಯತ ಧರ್ಮದ ಪ್ರಕಾರ ಮಾರ್ಗ ಕ್ರಿಯಾಚರಣೆಯನ್ನು ಪಾಲಿಸುತ್ತ ಬಂದನು. ಹೀಗಿರಲು ಒಂದು ದಿವಸ ಅವನ ಮನಸ್ಸಿನಲ್ಲಿ ತನ್ನ ಮನೆಯಲ್ಲಿ ಗಣಪರ್ವವನ್ನು ಮಾಡಬೇಕೆಂಬ ಅಭಿಲಾಷೆಯುಂಟಾಯಿತು. ಆ ದಿನ ಅವನ ತನ್ನ ಲಿಂಗ ಪೂಜೆಯಲ್ಲಿ ನಿರತನಾಗಿ ಆ ಸಮಯದಲ್ಲಿ ನಿನಗೇನು ಬೇಕು ಬೇಡ ಎಂಬ ಶಬ್ದಗಳು ಅವನ ಕಿವಿಗೆ ತಾಕಿದಂತಾದವು. ಆಗ ಅವನು ನನಗೊಂದು ಸ್ವರ್ಣ ಮತ್ಸ್ಯವನ್ನು ಕೊಡುವುದು ಎಂದು ಉಚ್ಚರಿಸಿದನು. ಹಾಗೆಯೇ ಆಗಲೆಂಬ ಶಬ್ದಗಳನ್ನು ಅವನು ಪುನಃ ಕೇಳಿ ತ್ರಿಪುರಾಂತಕೇಶ್ವರನ ಕೆರೆಗೆ ಬಂದು ಬಲೆ ಹಾಕಿರಲು ಅವನ ಗಾಳಕ್ಕೆ ಒಂದು ನಿಜವಾದ ಹೇಮದ ಮತ್ಸ್ಯವೇ ತಗುಲಿಬಂದಿತು. ಅವನು ಅದನ್ನು ಸಂತೋಷದಿಂದ ತೆಗೆದುಕೊಂಡು ಪೇಟೆಗೆ ಬಂದು ಮಾರಲು ಅವನಿಗೆ ಆದರಿಂದ ಭಾರೀ ಹಣವು ದೊರೆಯಿತು. ಆಗ ಅವನು ಶಿವಾನುಭವ ಮಂಟಪಕ್ಕೆ ಹೋಗಿ ಅಲ್ಲಿದ್ದ ಚರಮೂರ್ತಿಗಳಿಗೆ ತನ್ನ ಮನೆಗೆ ಆದಿನ ಪ್ರಸಾದಕ್ಕೆ ಬರಬೇಕೆಂದು ಬಿನ್ನಹ ಮಾಡಿ ಮನೆಗೆ ಬಂದನು.

---

**ಸಹಾಯಕ ಪ್ರಾಧ್ಯಾಪಕರು, ಶ್ರೀ. ಎಂ. ಕೆ. ಎಸ್. ಆರ್. ವಸ್ತ್ರದ ಕಲಾವಿಜ್ಞಾನ ಹಾಗು ಶ್ರೀ. ಎಸ್. ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ ಹುನಗುಂದ**

ಭೋಜನದ ಸಮಯವಾಯಿತು. ಆಗ ಬಹು ಜನ ಜಂಗಮರು ಅವನ ಮನೆಗೆ ಬರಹತ್ತಿದರು. ಅಲ್ಲಿ ಅವರು ಬಂದು ನೋಡುತ್ತಾರೆ ಅವನ ಅಂಗಳದಲ್ಲಿ ಸತ್ತ ಮೀನುಗಳೇ ಬಿದ್ದಿವೆ. ಎಲ್ಲೆಲ್ಲಿಯೂ ದುರ್ಗಂಧವೇ ಮುಸುಕಿ ಹೋಗಿತ್ತು. ಅದನ್ನು ಅವರು ನೋಡಿ ಹೇಸಿ ಹೊರಗಿನಿಂದಲೇ ಹೊರಟುಹೋಗಿ ಬಸವೇಶ್ವರನ ಮನೆಗೆ ಬಂದರು. ಕನ್ನಪ್ಪನು ಮನೆಯೊಳಗಿಂದ ಹೊರಗೆ ಬರುವಷ್ಟರಲ್ಲಿ ಜಂಗಮರೆಲ್ಲರೂ ಹೋಗಿ ಬಿಟ್ಟಿದನ್ನು ನೋಡಿ ಅವರನ್ನು ಕರೆತರಲು ಬಸವನ ಮಂದಿರಕ್ಕೆ ಬರಲು ಅವರು ಅವನಿಗೆ ನೀನೆಲ್ಲಿಯ ಭಕ್ತ? ನಿನ್ನ ವಿಭೂತಿ ರುದ್ರಾಕ್ಷಿ ಲಿಂಗವನ್ನು ನೋಡಿ ನಂಬಿ ಬಂದೆವು. ಇನ್ನು ಮೇಲೆ ನಿನ್ನ ಮನೆಗೆ ನಾವು ಎಂದಿಗೂ ಬರುವುದಿಲ್ಲ ಎಂದು ಹೇಳಿ ಅವರು ಅವನ ಲಿಂಗವನ್ನು ಕಿತ್ತು ಅವನನ್ನು ಹೊರಗೆ ಹಾಕಿದರು.

ಮುಂದೆ ಆ ಜಂಗಮರು ಬಸವೇಶ್ವರನ ಅರಮನೆಯಲ್ಲಿ ಭೋಜನಕ್ಕೆ ಕುಳಿತುಕೊಂಡು ಲಿಂಗಾರ್ಚನೆ ಮಾಡುತ್ತಿರುವಾಗ್ಗೆ ಅವರು ಲಿಂಗ ಸೆಜ್ಜೆಗಳನ್ನು ನೋಡುತ್ತಾರೆ ಅವುಗಳಲ್ಲಿ ಲಿಂಗವಿರಲಿಲ್ಲ. ಆಗ ಅವರು ಅಂಜಿ ಜರ್ಜರಿತರಾದರು. ಬಸವೇಶ್ವರನು ಅವರಿಂದ ನಡೆದ ಸಂಗತಿಗಳನ್ನೆಲ್ಲ ತಿಳಿದುಕೊಂಡು ಶಿವನು ಸರ್ವತೋಮುಖನಾಗಿದ್ದಾನೆ. ಈ ಜಂಗಮರು ತಪ್ಪು ಮಾಡಿದ್ದಾರೆಂದು ತಿಳಿದು ಅವನು ತಾನಾಗಿಯೇ ಗಾಣದ ಕನ್ನಪ್ಪನ ಮನೆಗೆ ಬಂದು ಅವನಿಗೆ ಜಂಗಮರು ನಿನ್ನ ಲಿಂಗವನ್ನು ಕಸಿದು ಅಪರಾಧ ಮಾಡಿದ್ದಾರೆ. ಅವರನ್ನು ಕ್ಷಮಿಸಿ. ಅವರ ಲಿಂಗವನ್ನು ಅವರಿಗೆ ಕೊಡಬೇಕೆಂದು ಅವನಿಗೆ ನಮಸ್ಕರಿಸಿದನು. ಆಗ ಕನ್ನಪ್ಪನು ಜಂಗಮರು ನನ್ನ ಲಿಂಗವನ್ನು ಕಸಿದಿದ್ದರ ಪರಿಣಾಮವಾಗಿ ಅವರಿಗೆ ಹೀಗಾಗಿರಬೇಕೆಂದು ಊಹಿಸಿ ನಾನು ಈಗ ತ್ರಿಪುರಾಂತಕೇಶ್ವರನ ಕೆರೆಗೆ ಹೋಗುವೆನು. ಅಲ್ಲಿಗೆ ಲಿಂಗಗಳನ್ನು ಕಳೆದುಕೊಂಡ ಜಂಗಮರೆಲ್ಲರಿಗೂ ಬರ ಹೇಳೆಂದು ಬಸವೇಶ್ವರನಿಗೆ ಹೇಳಿ ತಾನು ಕೆರೆಯ ತಡಿಯಲ್ಲಿ ಬಂದು ಶಿವನನ್ನು ಧ್ಯಾನಿಸಹತ್ತಿದನು. ಅಷ್ಟರಲ್ಲಿ ಲಿಂಗವನ್ನು ಕಳೆದುಕೊಂಡ ೩೬ ಜನ ಜಂಗಮರು ಅಲ್ಲಿಗೆ ಬರಲು ಕನ್ನಪ್ಪನ ಧ್ಯಾನದ ಮೂಲಕ ಅವರ ೩೬ ಲಿಂಗಗಳು ಕೆರೆಯ ನೀರಿನ ಮೇಲಿನಿಂದ ಹರಿದು ಬರಹತ್ತಿದವು. ಅವುಗಳನ್ನು ಅವರು ತಿರುಗಿ ತೆಗೆದುಕೊಂಡು ಕನ್ನಪ್ಪನೇ ನಾವು ನಿನಗೆ ಅಪರಾಧ ಮಾಡಿದೆವು. ನೀನೆ ನಿಜವಾದ ಶರಣನು. ನೀನೇ ನಮ್ಮ ಗುರುವು ಎಂದು ಸ್ತುತಿಸುತ್ತ ಮರಳಿ ಹೋದರು.

**ತನ್ನ ತಾ ಬೀಳುವುದು ಕಂಡು ತಳ್ಳಿ ಹಗೆಯಾಗಲೇಕೆ? ಒಡೆದುದ ಕಂಡು ಒಡೆಯರಿ ಎನಲೇಕೆ? ಇರಿ ಬಿಡು ಮುಡಿಯನರಿಯನರಿಯದೆ ಒಡೆಯರೆಂದು ಕೊಡುವ ಕಾಲ ಪಳಿಹಕ್ಕೆ ಪಳಿಹಕ್ಕೆ ಇವರರೊಡೆಯರಲ್ಲದೆ ಅಸಮಾಕ್ಷರಲ್ಲ ಇಂತೀ ಗಸಣೆಗಿನ್ನೇವೆ ಕನ್ನಯ್ಯ ಪ್ರಿಯಗುಹೇಶ್ವರ ಶರಣ ಅಲ್ಲಮ.**

**ಗಾಣವ ಹಾಕಲಾಗಿ ಅರಾರ ಸಿಕ್ಕಿದರು? ಆರೈಕೆಗೊಳ್ಳಯ್ಯ ಐದಕ್ಕೊಂದು ಹೋಗಿ ನಾಲ್ಕರಲ್ಲಿ ನಾಚಿಕೆಗೆಟ್ಟ ಜಗದಾಸೆಯು ಬಯಕೆಯಿಂದ ದಶಾವತಾರವಾದ ಇಷ್ಟರ ಇಂದ್ರಿಯಕ್ಕಾಗಿ ಪಾಶವ ಹೊತ್ತ ತಲೆಯಲ್ಲಿ ಇಂತೀ ವೇಷಧಾರಿ ಹಾಕಿದ ಗಾಣದಲ್ಲಿಯಷ್ಟಕ್ಕೆ ಸಿಕ್ಕಿ ಘಾಸಿಯಾದರು ಇನ್ನೀಸುವವರಾರಯ್ಯ ಗುಹೇಶ್ವರನ ಶರಣ ಅಲ್ಲಮನಲ್ಲದೇ?**

ಈ ವಚನದಲ್ಲಿ ತನ್ನ ಗಾಣ ಹಾಕುವ ಕಾಯಕವನ್ನು ಕುರಿತು ಹೇಳಿದ್ದಾನೆ. ಗಾಣವೆಂದರೆ ಗಾಣಿಗರು ಉಪಯೋಗಿಸುವ ಕಾಯಕವನ್ನು ಕುರಿತು ಹೇಳಿದ್ದಾನೆ. ಗಾಣವೆಂದರೆ ಗಾಣಗರು ಉಪಯೋಗಿಸುವ ಗಾಣವಿರದೆ ಮೀನು ಬಲೆಗಾರು ಹಾಕುವ ಬಲೆ ಎಂಬ ಅರ್ಥವು ಈ ಶಬ್ದಕ್ಕೆ ಇದೆ.

**ನಾ ಬಂದುದಕ್ಕೆ ಮಾಡಿದೆ ನೀ ಕಳುಹಿದವರ ಕೊಂದೆ, ಬಂದೆ ನೀವಿರಿಸಿದಂತಿದ್ದು ಎನಗಿನ್ನು ಬಂದು ಮೋಕ್ಷವೇಕೆ? ಕನ್ನಯ್ಯ ಪ್ರಿಯಗುಹೇಶ್ವರನ ಶರಣ ಅಲ್ಲಮನಲ್ಲಿ ಲೇಪವಾದವಂಗೆ?**

ಕೆಲವು ವಚನಗಳಲ್ಲಿ ಗೂಢಾರ್ಥಗಳಿದ್ದು ಅವು ಬಹು ಅಸ್ಪಷ್ಟವಾಗಿವೆ. ಆದ್ದರಿಂದ ಅವುಗಳನ್ನು ಇಲ್ಲಿ ವಿವರಿಸಲಾಗುವುದಿಲ್ಲ.

ಶಿವಶರಣರೆಲ್ಲರೂ ಅಹಿಂಸಾಚಾರಿಗಳು ಆದರೆ ಶಿವಶರಣರಲ್ಲಿ ಮೂವರು ಇದಕ್ಕೆ ಅಪವಾದಗಳಾಗಿದ್ದಾರೆ. ಶ್ವಪಚಯ್ಯ, ತೆಲಗು ಜೋಮ್ಮಯ್ಯ ಮತ್ತು ಗಾಣದ ಕನ್ನಪ್ಪ ಇವರನ್ನು ಕಾಣುತ್ತೇವೆ. ಇವರೆಲ್ಲರೂ ಶಿವಶರಣರಲ್ಲಿ ಶ್ರೇಷ್ಠ ಸ್ಥಾನವನ್ನು ಹೊಂದಿದವರು. ಶ್ವಪಚಯ್ಯನು ಬಸವೇಶ್ವರನಕ್ಕಿಂತಲೂ ಬಹಳ ಹಿಂದಿನವನು ತೆಲುಗು ಜೊಮ್ಮಯ್ಯನು ಅವನಕ್ಕಿಂತ ೬೦-೭೦ ವರ್ಷ ಮೊದಲು ಇದ್ದವನು. ಆದರೆ ಗಾಣದ ಕನ್ನಪ್ಪನು ಅವನ ಸಮಕಾಲೀನನು. ಇದೊಂದು ವಿಚಾರಾರ್ಹವಾದ ಸಂಗತಿಯಾಗಿದೆ. ಒಂದು ಧರ್ಮವು ಪ್ರಸಾರ ಹೊಂದುವ ಕಾಲದಲ್ಲಿ ಅನೇಕ ರೀತಿ ನಡೆಗಳುಳ್ಳ ಸಮಾಜಗಳ ಜನರು ಅವರಲ್ಲಿ ಬಂದು ಸೇರ್ಪಡೆಯಾಗುವದುಂಟು. ಅವರು ತಮ್ಮ ಪೂರ್ವದ ಪದ್ಧತಿಗಳನ್ನು ಕೂಡಲೇ ಬಿಡುವದಿಲ್ಲ. ಆದರೆ ಅವರು ಶುದ್ಧ ಮನಸ್ಸುಳ್ಳವರು. ಇಂಥವರನ್ನು ಧರ್ಮ ಸ್ಥಾಪನೆಯ ಆರಂಭದ ಕಾಲದಲ್ಲಿ ಉಪೇಕ್ಷಿಸದೆ ಅವರಿಗೂ ಬೋಧನೆಮಾಡಿದ್ದು



ಕಂಡುಬರುತ್ತದೆ. ಅವರನ್ನು ಸಮಾಜದಲ್ಲಿ ತೆಗೆದುಕೊಂಡು ಅವರಲ್ಲಿ ತಮ್ಮ ರೀತಿ ನಡೆಗಳನ್ನು ತಿಳುಹಿಸುತ್ತ ಹೋಗಿ ಅವರನ್ನು ಸರಿಯಾದ ಹಾದಿಗೆ ಹಚ್ಚಿರಬಹುದೆಂದು ತೋರುತ್ತದೆ. ಆದ್ದರಿಂದ ಲಿಂಗಾಯತರಿಗೆ ಹೊರತಾದ ಆಚಾರಗಳನ್ನು ಪಾಲಿಸುವಂಥ ಶಿವಶರಣರ ಉದಾಹರಣೆಗಳು ಅಲ್ಲಲ್ಲಿ ದೊರೆಕುತ್ತವೆ. ಆದರೆ ಅವು ಪೂರ್ವಾಶ್ರಮದಲ್ಲಿ ಆದವುಗಳಿರಬಹುದು. ಆದುದರಿಂದ ಶರಣರು ಇಂಥ ನಡೆಗಳನ್ನು ಕೆಲವು ಕಾಲ ಉಪೇಕ್ಷಿಸಲೂ ಬಿಟ್ಟಿರಬಹುದು. ತಮಿಳು ದೇಶದ ೬೩ ಪುರಾತನರ ಚರಿತ್ರೆಗಳಲ್ಲಿಯೂ ಕೂಡಾ ಇಂಥ ಸಂಗತಿಗಳು ಕಂಡು ಬರುತ್ತವೆ. ಬೇಡರ ಕನ್ನಪ್ಪನು ಮಾಂಸಹಾರಿಯು, ಅತೀ ಭಕ್ತನು ಮೀನು ಬಲೆಗಾರನು ಎಂದು ಕಂಡರೂ ಇವರು ಬದುಕಿನಲ್ಲಿ ಅತ್ಯಂತ ಪೂಜ್ಯರಾಗಿದ್ದಾರೆ ಎಂದು ತಿಳಿದು ಬರುತ್ತದೆ

**ಅಡಿ ಟಿಪ್ಪಣಿಗಳು:-**

೧) ಫ. ಗು. ಹಳಕಟ್ಟಿ (ಸಂ) ಬಸವಣ್ಣನವರ ವಚನಗಳು, ಶಿವಾನುಭವ ಗ್ರಂಥಮಾಲೆ.

೨) ಬಿ. ವ್ಹಿ. ಶಿರೂರ (ಸಂ) ಶಿವಸಂಗಮ (ಸಂಸ್ಮರಣ ಗ್ರಂಥ)

೩) ಎಸ್. ವ್ಹಿ. ಅಯ್ಯನಗೌಡರ : ಆಧುನಿಕ ಜಗತ್ತಿಗೆ ಬಸವೇಶ್ವರ ಹೊಸ ಸಂದೇಶ

೪) ಬಿ. ಬಿ. ಹೆಂಡಿ : ಬಸವೇಶ್ವರ

೫) ಪ್ರಭುಶಂಕರ : ವಚನ ಸಾಹಿತ್ಯ ಮತ್ತು ವೀರಶೈವ ಧರ್ಮ

೬) ಪಿ. ವಿ. ನಾರಾಯಣ : ವಚನ ಪರಿಸರ

೭) ಬಿ. ವಿ. ಮಲ್ಲಾಪೂರ : ಶೂನ್ಯ ಸಂಪಾದನೆಗಳು

೮) ವೀರಣ್ಣ ರಾಜೂರ : ಬಸವ ಪುರಾಣ ಪರಂಪರೆ

೯) ಬಸವ ಪಥ ಸಂಪುಟ ೨೨ : ಸಂಚಿಕೆ ೬ : ಸಪ್ಟಂಬರ್ ೨೦೦೦

೧೦) ಶಿವಾನುಭವ ಸಂಪುಟ : ೧೬ ಸಂಚಿಕೆ : ೭

## ಸಿದ್ಧರಾಮೇಶ್ವರರು

ಯೋಗಿಗಳ ಯೋಗಿ ಶಿವಯೋಗಿ ಎಂದು ಹೆಸರಾದವರು ಸಿದ್ಧರಾಮೇಶ್ವರರು. ಸೊಲ್ಲಾಪುರ (ಸೊನ್ನಲಾಪುರ)ವನ್ನು ಭೂಕೈಲಾಸವಾಗಿಸಿದವರು. ಅದು ಅವರ ಜನ್ಮಸ್ಥಳ. ಮೊರಡಿಯ ಮುದ್ದುಗೌಡ ಮತ್ತು ಸುಗ್ಗವ್ವೆ ತಂದೆ-ತಾಯಿಗಳು. 'ಸಾಕಾರ ನಿಷ್ಠೆ ಭೂತಂಗಳೊಳಗನುಕಂಪೆ ತಾನೆ ಪರಬೊಮ್ಮ' ಇದು ಅವರ ಜೀವನ ನಿಷ್ಠೆ. 'ಕಪಿಲಸಿದ್ಧ ಮಲ್ಲಿಕಾರ್ಜುನಾ, ಕಪಿಲಸಿದ್ಧ ಮಲ್ಲಿನಾಥಾ, ಯೋಗಿನಾಥಾ' ಎಂಬ ಅಂಕಿತಗಳಲ್ಲಿ ಸಿದ್ಧರಾಮೇಶ್ವರರ ೧೯೯೨ ವಚನಗಳು ದೊರೆತಿವೆ. ಅಲ್ಲಮಪ್ರಭುವಿನೊಂದಿಗೆ ಕಲ್ಯಾಣಕ್ಕೆ ಹೋಗಿ ಚೆನ್ನಬಸವಣ್ಣನವರಿಂದ ಲಿಂಗದೀಕ್ಷೆ ಪಡೆದ ಅವರು ಲಿಂಗಾನುಸಂಧಾನದೊಂದಿಗೆ ಸಾಮಾಜಿಕ ಬದ್ಧತೆಯನ್ನು ಮೆರೆದವರು. 'ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು' ಎಂಬುದು ಅವರ ಬದುಕಿನ ಆದರ್ಶ. ಶರಣರ ವಿಚಾರಧಾರೆಯ ಮೂಲಕ ಸಮಾಜದಲ್ಲಿ ಪರಿವರ್ತನೆಯನ್ನುಂಟು ಮಾಡಿದ ಅವರು ಪ್ರಗತಿಪರರಾಗಿದ್ದರು. ಅವರ ವಚನಗಳಲ್ಲಿ ಸಮತಾಗುಣ, ಸತಿಪತಿಭಾವ, ಮಾನವ ಬದುಕಿನ ಮೌಲ್ಯಾದರ್ಶಗಳು ಹೇರಳವಾಗಿವೆ. ಕಾವ್ಯಾತ್ಮಕ ಗುಣಗಳಿಂದಾಗಿ ಅವರ ವಚನಗಳು ಅಪ್ಯಾಯಮಾನವಾಗಿದ್ದು, ಆಡು ಭಾಷೆಯ ಸೊಗಡಿನಿಂದ ಪರಿಪುಷ್ಟವಾಗಿವೆ. ಕಿರಿಯ ವಾಕ್ಯಗಳಲ್ಲಿ ಹಿರಿದರ್ಥ ತುಂಬಿದ ವಚನಗಳು ಓದುಗರ ಮನ ಸೆಳೆಯುತ್ತವೆ. ಬಸವಣ್ಣನವರನ್ನು ಬಹುವಾಗಿ ಸ್ತುತಿಸಿದ ಸಿದ್ಧರಾಮೇಶ್ವರರು ಕಲ್ಯಾಣಕ್ರಾಂತಿಯ ನಂತರ ಸೊನ್ನಲಾಪುರ (ಸೊಲ್ಲಾಪುರ)ದಲ್ಲಿ ಲಿಂಗೈಕ್ಯರಾದರು.

**ಡಾ. ತೋಂಟದ ಸಿದ್ಧರಾಮ ಸ್ವಾಮಿಗಳು, ಡಂಬಳ-ಗದಗ**